## ಅಂಬೋಲೆ, ಝೀಂಬೋಲೆ, ಓಲೆ ಓಲೆಓಲೆ...

ಮಹಾರಾಷ್ಟ್ರದ ಸಿಂಧದುರ್ಗ ತಾಲ್ಲೂಕಿಗೆ ಬರುವ ಅಂಬೋಲಿ ಜಲಪಾತ; ಗೋವಾ ಮಾರ್ಗದಲ್ಲಿ ದಟ್ಟಾರಣ್ಯದ ಮಧ್ಯೆ ಸಾಗಿದರೆ ಪ್ರತ್ಯಕ್ಷವಾಗುತ್ತದೆ.

ಭುವನ ಸೌಂದರ್ಯವೆಲ್ಲ ಒಂದೆಡೆ ಇಂಬುಗೊಂಡಂತೆ ಕಾಣುವ ಈ ಜಲಪಾತ ವಿಶ್ವಪ್ರಸಿದ್ಧವಾಗಿದೆ. ಕರ್ನಾಟಕ, ಮಹಾರಾಷ್ಟ್ರ, ಗೋವಾ ಮಾತ್ರವಲ್ಲ; ಉತ್ತರ ಭಾರತದಿಂದಲೂ ಅಪಾರ ಸಂಖ್ಯೆಯ ಪ್ರವಾಸಿಗರನ್ನು ಬರಸೆಳೆಯುತ್ತಿದೆ.

ಅಂಬೋಲಿ ಘಾಟಿ ಸಮುದ್ರ ಮಟ್ಟದಿಂದ ಸುಮಾರು 700 ಮೀಟರ್ ಎತ್ತರದಲ್ಲಿದೆ. ಈ ದುರ್ಗಮ ಪರ್ವತಗಳ ಸಾಲಿನಲ್ಲೇ ಅಂಬೋಲಿ ಜಲಪಾತವಿದೆ. ಬೆಟ್ಟ– ಗುಡ್ಡಗಳ ಸಂದಿಯಿಂದ ನುಗ್ಗಿ ಬರುವ ಹಾಲಿನ ಹೊಳೆಯಲ್ಲಿ ಮಿಂದೇಳುವುದೇ ಸಂಭ್ರಮ. ಮಳೆಗಾಲಕ್ಕೆ ಮೈನೆರೆದ ಈ ಜಲಸುಂದರಿಯ ಅಡಿಯಲ್ಲಿ ನಿಂತರೆ ಸ್ವರ್ಗಕ್ಕೆ ಮೂರೇ ಗೇಣು. ಮುಗಿಲ ಮೇಲಿಂದ ಯಾರೋ ಹಾಲನ್ನು ನಿಮ್ಮ ಮೇಲೆ ಸುರಿದ ಅನುಭವವಾಗುತ್ತದೆ.

ಅಂಬೋಲಿಯ ರುದ್ರಾವತಾರಕ್ಕೆ ಬೆರಗಾಗುವ ಪ್ರವಾಸಿಗರು ಕೂಗಾಟ, ಚೀರಾಟ, ಸಿಳ್ಳೆಗಳ ಮೂಲಕ ಸಂಭ್ರಮ ಅನುಭವಿಸುವುದೇ ಚೆಂದ. ಇದು ಅತ್ಯಂತ ಸುರಕ್ಷಿತ ತಾಣವಾದ್ದರಿಂದ ಪುಟಾಣಿ ಮಕ್ಕಳು, ಮಹಿಳೆಯರು, ಹಿರಿಯರು ಕೂಡ ಇನ್ನಿಲ್ಲದಂತೆ ಸಂಭ್ರಮಿಸಬಹುದು.

## ಮೇಲಕ್ಕೆ ಚಿಮ್ಮುವ ಜಲಪಾತ!

ಜಲಪಾತದ ನೀರು ಕೆಳಕ್ಕೆ ಧುಮ್ಮಿಕ್ಕುವುದನ್ನು ಎಲ್ಲಿಯಾದರೂ ನೋಡಬಹುದು. ಆದರೆ, ಕೆಳಗೆ ಬಿದ್ದ ನೀರು ಕಾರಂಜಿಯಾಗಿ ಮತ್ತೆ ಮೇಲಕ್ಕೆ ಚಿಮ್ಮುವುದನ್ನು ನೋಡಿದ್ದೀರಾ? ಪ್ರಕೃತಿಯ ಈ ವಿಸ್ಮಯ ನೋಡಬೇಕೆಂದರೆ ನೀವು ಕವಲೆಸಾತ್ (ಕವಳೇಶೀಟ್)ಗೆ ಬರಬೇಕು.

ಅಂಬೋಲಿಯಿಂದ 8 ಕಿ.ಮೀ. ದೂರದಲ್ಲಿ ಈ ಕವಲೆಸಾತ್ ಇದೆ. ಮಳೆಗಾಲದಲ್ಲಿ ಇಲ್ಲಿ 20 ಜಲಪಾತಗಳು ಒಂದೇ ಕಡೆ ಕಾಣಸಿಗುತ್ತವೆ ಎಂಬುದೇ ಇದರ ವೈಶಿಷ್ಟ್ಯ.

ದಟ್ಟ ಹಸಿರು ಹೊದ್ದ ಬೃಹತ್ ಬೆಟ್ಟಗಳ ಸಾಲು. ಬೆಟ್ಟಗಳ ಹೊಕ್ಕಳದಿಂದ ಹೊರಚಿಮ್ಮಿದಂತೆ ಕಾಣುವ ಜಲಪಾತಗಳು. ಆಗಸವನ್ನೇ ಮುತ್ತಿಕ್ಕುವಂಥ ಮಂಜು ಮುಸಲಧಾರೆ. ಕಣ್ಣು ಹಾಯಿಸಿದಷ್ಟೂ ದೂರದವರೆಗೆ ರಮ್ಯ ಕಂದಕ. ಇಣುಕಿ ನೋಡದರೆ ಪಾತಾಳಕ್ಕೆ ಜಾರಿಬೀಳುವ ಮನಸ್ಸು... ಕವಳೇಶೀಟ್ ನೋಡಿದ ಯಾರೆಲ್ಲರಿಗೂ ಆಗುವ ಅನುಭವವಿದು.

ಯಾರೋ ಭೂಮಿಯನ್ನು ಸೀಳಿ ತೊಟ್ಟಿಲಂತೆ ನಿರ್ಮಾಣ ಮಾಡಿ ಇಟ್ಟಿದ್ದಾರೇನೋ ಎಂಬಂಥ ಭಾವ ಇಲ್ಲಿ ಮೂಡುತ್ತದೆ.

ಈ ಕಂದರದ ಸುತ್ತಲೂ ಜಲಪಾತಗಳು ಧುಮ್ಮಿಕ್ಕುತ್ತಿವೆ. 10 ಜಲಧಾರೆಗಳು ಕಣ್ಣಿಗೆ ಕಾಣುತ್ತವೆ. ಉಳಿದವರು ದಟ್ಟ ಮಂಜಿನಲ್ಲಿ ನಾಚಿ ಮರೆಯಾಗಿವೆ.

ಹೀಗೆ ಕಂದರಕ್ಕೆ ಬೀಳುವ ಜಲಪಾತದ ನೀರು ಮತ್ತೆ ಮೇಲಕ್ಕೆ ಚಿಮ್ಮಿ ಕಾರಂಜಿಯಾಗುವುದೇ ಇಲ್ಲಿನ ವಿಶೇಷ. ಬೆಟ್ಟದಿಂದ ಕೆಳಗೆ ರೇನ್‌ಕೋಟ್, ಜಾಕೆಟ್, ನೀರಿನ ಖಾಲಿ ಬಾಟಲಿ, ಚಪ್ಪಲಿ... ಯಾವುದನ್ನು ಎಸೆದರೂ ಅದು ಮರಳಿ ಮೇಲಕ್ಕೇ ಎಸೆಯುತ್ತದೆ! ಸುತ್ತ ಮುತ್ತಿಕೊಂಡ ಬೆಟ್ಟಗಳಿಗೆ ಬಡಿದು ಬರುವ ಗಾಳಿಯ ರಭಸದಿಂದ ವಸ್ತುಗಳು ಮರಳಿ ಮೇಲಕ್ಕೆ ಚಿಮ್ಮುತ್ತವೆ. ಆಳದಲ್ಲಿ ಗುರುತ್ವಾಕರ್ಷಣೆ ಶಕ್ತಿ ಕಡಿಮೆ ಇರುವುದೇ ಈ ವಿಸ್ಮಯಕ್ಕೆ ಕಾರಣ.

## ಹೋಗುವುದು ಹೇಗೆ?

ಬೆಳಗಾವಿಯಿಂದ 70 ಕಿ.ಮೀ. ಹುಬ್ಬಳ್ಳಿಯಿಂದ 168 ಕಿ.ಮೀ ಅಂತರವಿದೆ. ಗೋವಾ ಮಾರ್ಗಕ್ಕೆ ಸಾಗುವ ಬಸ್, ಕಾರು, ಬೈಕುಗಳ ಮೂಲಕವೂ ಪ್ರಯಾಣ ಮಾಡಬಹುದು. ಗೋವಾದಿಂದಲೂ ಬಸ್, ರೈಲು ಸಂಚಾರವಿದೆ. ರೈಲಿಗೆ ಬರುವವರು ಸಾವಂತವಾಡಿಯವರೆಗೆ ಬರಬೇಕು. ಅಲ್ಲಿಂದ 28 ಕಿ.ಮೀ. ಬಸ್ ಸಂಚಾರ ಸಾಧ್ಯ. ಬೆಳಗಾವಿ, ಹುಬ್ಬಳ್ಳಿ ಹಾಗೂ ಪಣಜಿಯಲ್ಲಿ ವಿಮಾನ ನಿಲ್ದಾಣಗಳೂ ಇವೆ.

ಸಹ್ಯಾದ್ರಿ ಶ್ರೇಣಿಯ ಕೂಸು ಅಂಬೋಲಿ. ಅರಣ್ಯದ ಮಧ್ಯೆ, ದಟ್ಟ ಮಂಜು, ರಭಸದ ಮಳೆ ಯಾವಾಗಲೂ ಇರುತ್ತದೆ. ಜತನ ಮಾಡಿಕೊಂಡು ಇಲ್ಲಿಗೆ ಬರಬೇಕು.

ಇಲ್ಲಿ ತಿಂಡಿ– ತೀರ್ಥಗಳಿಗೆ ಕೊರತೆ ಇಲ್ಲ. ಬಿಸಿ ವಡಾಪಾವ್, ಬಜ್ಜಿ, ಆಮ್ಲೆಟ್, ಎಗ್‌ಬುರ್ಜಿ, ಸುಟ್ಟ ಗೊಂಜಾಳುತೆನೆ, ಶೇಂಗಾ, ಪಾನೀಯಗಳೂ ಸಿಗುತ್ತವೆ.



ಬೆಳಗಾವಿಯ ಅಂಬೋಲಿ ಜಲಪಾತದ ಮುಂದೆ ಪ್ರವಾಸಿಗರ ಸಂಭ್ರಮ
ಚಿತ್ರ: ಸಂತೋಷ ಈ. ಚಿನಗುಡಿ

ಗೋಕಾಕ ಜಲಪಾತದ ವೈಭವ.
ಚಿತ್ರ: ಏಕನಾಥ ಅಗಸಿಮನಿ

